# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 704 (765)
ಮಾನ್ಯ ಸದಸ್ಯರ ಹೆಸರು : ಶ್ರೀ. ಹೆಚ್.ಪಿ ಸುಧಾಮ್ ದಾಸ್ (ನಾಮನಿರ್ದೇಶನ ಹೊಂದಿದವರು)
ಉತ್ತರಿಸುವ ದಿನಾಂಕ : 23.07.2024
ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ದಿನಾಂಕ:21-03-2009 ರಿಂದ ಅನ್ವಯವಾಗುವಂತೆ ಎಸ್‌ಟಿ-ಎಸ್‌ಟಿ ಉದ್ದಿಮೆದಾರರಿಗೆ ನಿಗಧಿತ ಪ್ರಮಾಣ ಮೀಸಲಿರಿಸಿ ಹಂಚಿಕೆ ಮಾಡುವುದಾಗಿ ಕೆಲವು ಕೈಗಾರಿಕಾ ಪ್ರದೇಶಗಳಲ್ಲಿ ಬೃಹತ್ ಕೈಗಾರಿಕೆಗಳಿಗೆ Bulk Land ಹಂಚಿಕೆ ಮಾಡಿದ್ದರಿಂದ ಮೀಸಲಾತಿಯಲ್ಲಿನ ಶೇಕಡವಾರು ಪ್ರಮಾಣ ಕಡಿಮೆಯಾಗಿದೆಯೇ; | • ದಿನಾಂಕ:21/03/2009 ರಂದು ನಡೆದ ಕೆ.ಐ.ಎ.ಡಿ. ಮಂಡಳಿ ಸಭೆಯಲ್ಲಿ ಹೊಸದಾಗಿ ಅಭಿವೃದ್ಧಿಪಡಿಸುವ ಕೈಗಾರಿಕಾ ಪ್ರದೇಶಗಳಲ್ಲಿ ಹಂಚಿಕೆ ಪ್ರದೇಶದ ಶೇ.22.65% ರಷ್ಟು ಜಮೀನನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಹಂಚಿಕೆ ಮಾಡಲು ಕಾಯ್ದಿರಿಸಲು ನಿರ್ಣಯಿಸಲಾಗಿರುತ್ತದೆ.<br><br>• ಹಿಂದೆ, ಕೆಲವು ಕೈಗಾರಿಕಾ ಪ್ರದೇಶಗಳಲ್ಲಿ ಬೃಹತ್ ಬಂಡವಾಳ ಹೂಡುವ ಪ್ರಮುಖ ಯೋಜನೆಗಳಿಗೆ ಬೃಹತ್ ಪ್ರಮಾಣದ ಜಮೀನು ಹಂಚಿಕೆ ಮಾಡಿದ್ದರಿಂದ, ಮೀಸಲಾತಿಯಲ್ಲಿನ ಶೇಕಡವಾರು ಪ್ರಮಾಣ ಕಡಿಮೆಯಾದ ಕಾರಣ ಅಂತಹ ಪ್ರಕರಣಗಳಲ್ಲಿ, ಅಕ್ಕಪಕ್ಕದ ಹೊಸ ಕೈಗಾರಿಕಾ ಪ್ರದೇಶಗಳಲ್ಲಿ ಶೇಕಡವಾರು ಕೊರತೆಯನ್ನು ಸರಿದೂಗಿಸಲಾಗುತ್ತಿದೆ.<br><br>• ಅಲ್ಲದೇ, ಮಂಡಳಿಯು ಬಲ್ಕ್ ಜಮೀನು ಹಂಚಿಕೆಗೆ ಸಂಬಂಧಿಸಿದಂತೆ, ಕೋಲಾರ ಜಿಲ್ಲೆಯ ಮಿಂಡಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಪ್ರಾರಂಭದಲ್ಲಿ ಬಲ್ಕ್ ಜಮೀನು ಹಂಚಿಕೆಗಾಗಿ ಅಭಿವೃದ್ಧಿಪಡಿಸಲು ಮಂಡಳಿಯಲ್ಲಿ ವಿನ್ಯಾಸ ನಕ್ಷೆ ಅನುಮೋದನೆಗೊಂಡಿತ್ತು. ಸಣ್ಣ ಉದ್ದಿಮೆದಾರರಿಗೆ ನಿವೇಶನ ಮೀಸಲಿಟ್ಟಿರಲಿಲ್ಲ. ನಂತರದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ 48.78 ಎಕರೆ ಜಮೀನನ್ನು ಮೀಸಲಿಟ್ಟು ಉಪ ಬಡಾವಣೆ ರಚಿಸಲಾಗಿದೆ.<br><br>• ಮಂಡಳಿಯು ದಾಬಸ್ ಪೇಟೆ 5ನೇ ಹಂತ ಕೈಗಾರಿಕಾ ಪ್ರದೇಶವನ್ನು ಪ್ರಾರಂಭದಲ್ಲಿ ಸಂಪೂರ್ಣವಾಗಿ ಬಲ್ಕ್ ಜಮೀನು ಹಂಚಿಕೆಗಾಗಿ ಅಭಿವೃದ್ಧಿಪಡಿಸಲು ಮಂಡಳಿಯಲ್ಲಿ ವಿನ್ಯಾಸ ನಕ್ಷೆ ಅನುಮೋದನೆಗೊಂಡಿತ್ತು. ಸಣ್ಣ ಉದ್ದಿಮೆದಾರರಿಗೆ ನಿವೇಶನ ಮೀಸಲಿಟ್ಟಿರಲಿಲ್ಲ. ನಂತರ, ಸದರಿ ಕೈಗಾರಿಕಾ ಪ್ರದೇಶದಲ್ಲಿ ಲಭ್ಯವಾದ ಬಲ್ಕ್ ನಿವೇಶನಗಳಲ್ಲಿ 247.79 ಎಕರೆ ಜಮೀನಿನಲ್ಲಿ ಉಪಬಡಾವಣೆ ನಿರ್ಮಿಸಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಮೀಸಲಿಟ್ಟು ಹಂಚಿಕೆ ಮಾಡಲಾಗಿದೆ. |

| | | |
|---|---|---|
| | | • ಮುಂದುವರೆದು, ದಿನಾಂಕ:26-12-2023 ರಂದು ನಡೆದ 379ನೇ ಕೆಐಎಡಿ ಮಂಡಳಿ ಸಭೆಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ಮತ್ತು ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ದೇವನಹಳ್ಳಿ ಸಾಮಾನ್ಯ ಕೈಗಾರಿಕಾ ಪ್ರದೇಶವನ್ನು 986.57 ಎಕರೆ ಪ್ರದೇಶದಲ್ಲಿ ಅಭಿವೃದ್ಧಿಪಡಿಸಲು ಪರಿಷ್ಕೃತ ವಿನ್ಯಾಸ ನಕ್ಷೆ-3 ಅನುಮೋದಿಸಿದ್ದು, ಸದರಿ ವಿನ್ಯಾಸ ನಕ್ಷೆಯಲ್ಲಿ 497.11 ಎಕರೆ ಜಮೀನನ್ನು ಬಲ್ಕ್ ಜಮೀನು ಹಂಚಿಕೆಗಾಗಿ ಗುರುತಿಸಲಾಗಿದೆ. ಸದರಿ ಕೈಗಾರಿಕಾ ಪ್ರದೇಶದಲ್ಲಿ ಬಲ್ಕ್ ಜಮೀನು ಹೊರತು 255 ಎಕರೆ ಹಂಚಿಕೆಗೆ ಲಭ್ಯವಾಗಿರುತ್ತದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಶೇ.24.10 ರಷ್ಟು 61.45 ಎಕರೆ ಜಮೀನನ್ನು ಮೀಸಲಿಡಲಾಗಿದೆ. ಆದರೆ, ದೇವನಹಳ್ಳಿ ಸಾಮಾನ್ಯ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸುವಾಗಲೇ ಬಲ್ಕ್ ಜಮೀನು ಮತ್ತು ಕೈಗಾರಿಕಾ ನಿವೇಶನಗಳನ್ನು ಬೇರ್ಪಡಿಸಿ ಮಂಡಳಿಯಲ್ಲಿ ವಿನ್ಯಾಸ ನಕ್ಷೆ ಅನುಮೋದನೆಗೊಂಡಿರುವುದರಿಂದ, ಅಭಿವೃದ್ಧಿಗೊಳ್ಳುತ್ತಿರುವ ಕೈಗಾರಿಕಾ ನಿವೇಶನಗಳಿಗೆ ಲಭ್ಯವಾದ ಜಮೀನಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಶೇ.24.10 ರಷ್ಟು 61.45 ಎಕರೆ ಜಮೀನನ್ನು ಮೀಸಲಿಡಲಾಗಿದೆ. |
| ಆ) | ಅಂತಹ ಪ್ರಕರಣದಲ್ಲಿ ಪಕ್ಕದ ಕೈಗಾರಿಕಾ ಪ್ರದೇಶಗಳಲ್ಲಿ ಶೇಕಡವಾರು ಕೊರತೆಯನ್ನು ಸರಿದೂಗಿಸಲಾಗುತ್ತಿದೆಯೇ; | ಮಂಡಳಿಯು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಶೇ.22.65 ರಷ್ಟು ಜಮೀನು ಮೀಸಲಿಟ್ಟು ಅದರಲ್ಲಿ ಕೊರತೆ ಉಂಟಾದ ಪ್ರಮಾಣವನ್ನು ಈ ಕೆಳಕಂಡ ಕೈಗಾರಿಕಾ ಪ್ರದೇಶಗಳಲ್ಲಿ ಸರಿದೂಗಿಸಲು ಕ್ರಮವಹಿಸಲಾಗಿರುತ್ತದೆ:<br>➢ ಹೈಟೆಕ್, ಡಿಫೆನ್ಸ್ & ಏರೋಸ್ಪೇಸ್ ಪಾರ್ಕ್ ಫೇಸ್-1 ಕೈಗಾರಿಕಾ ಪ್ರದೇಶದಲ್ಲಿ ಸುಮಾರು 70 ಎಕರೆ ಜಮೀನನ್ನು ಮೆ: CDC Development India Pvt. Ltd., ರವರಿಗೆ ಹಂಚಿಕೆ ಮಾಡಿ ಕಡಿಮೆಯಾದ ಕಾರಣ, ಹೈಟೆಕ್, ಡಿಫೆನ್ಸ್ & ಏರೋಸ್ಪೇಸ್ ಪಾರ್ಕ್ ಫೇಸ್-2 ಕೈಗಾರಿಕಾ ಪ್ರದೇಶದಲ್ಲಿ ಹೆಚ್ಚುವರಿ 70 ಎಕರೆ ಜಮೀನನ್ನು ಹಂಚಿಕೆ ಮಾಡಲಾಗಿರುತ್ತದೆ.<br>➢ ತುಮಕೂರು ಜಿಲ್ಲೆ, ಸಿರಾ ಕೈಗಾರಿಕಾ ಪ್ರದೇಶದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗದ ಉದ್ದಿಮೆದಾರರಿಗೆ ಶೇ. 22.65 ರಷ್ಟು 79.75 ಎಕರೆ ಜಮೀನನ್ನು ಮೀಸಲಿಟ್ಟಿದ್ದು, ಹೆಚ್ಚುವರಿಯಾಗಿ 40.40 ಎಕರೆ ಜಮೀನನ್ನು ಹಂಚಿಕೆ ಮಾಡಿದ್ದು, ಒಟ್ಟಾರೆ 120.15 ಎಕರೆ ಜಮೀನನ್ನು ಹಂಚಿಕೆ ಮಾಡಲಾಗಿದೆ.<br>➢ ಮೈಸೂರು ಜಿಲ್ಲೆ, ಕೂರ್ಗಳ್ಳಿ ಮತ್ತು ಅಡಕನಹಳ್ಳಿ ಕೈಗಾರಿಕಾ ಪ್ರದೇಶಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಜಮೀನು ಹಂಚಿಕೆಯ ಮೀಸಲಾತಿ ಪ್ರಮಾಣ ಕೊರತೆ ಇರುವುದನ್ನು ಸರಿದೂಗಿಸಲು ಚಾಮರಾಜನಗರ ಜಿಲ್ಲೆ, ಬದನಗುಪ್ಪೆ |

| | | |
|---|---|---|
| | | ಕಲ್ಲಂಬಳ್ಳಿ ಕೈಗಾರಿಕಾ ಪ್ರದೇಶದಲ್ಲಿ ದಿನಾಂಕ:06-03-2023 ರ ಸರ್ಕಾರದ ಅನುಮೋದನೆಯನ್ವಯ 50 ಎಕರೆ ಜಮೀನನ್ನು ಹೆಚ್ಚುವರಿಯಾಗಿ ಹಂಚಿಕೆ ಮಾಡಲು ನಿರ್ಣಯಿಸಲಾಗಿರುತ್ತದೆ. |
| ಇ) | 2024ರ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಗೆ ನೀಡಿದ ಹೆಚ್ಚುವರಿ ಅಂಶಗಳ ಮಾಹಿತಿಯಲ್ಲಿ KIADB ಮಂಡಳಿಯು ತದನಂತರ ಹಂಚಿಕೆಗಾಗಿ ಪರಿಗಣಿಸುವ ಕೈಗಾರಿಕಾ ಪ್ರದೇಶಗಳಲ್ಲಿ ಪಾಲಿಸಲಾಗುತ್ತಿದೆ ಎಂದು ತಿಳಿಸಿರುವ ವಿವರಗಳ ಮಾಹಿತಿ ಒದಗಿಸುವುದು? | • ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗದ ಉದ್ದಿಮೆದಾರರಿಗೆ ದಿನಾಂಕ: 21-03-2009 ರಿಂದ ಅನ್ವಯವಾಗುವಂತೆ ಹೊಸ ಕೈಗಾರಿಕಾ ಪ್ರದೇಶಗಳಲ್ಲಿ ಶೇ.22.65 ರಷ್ಟು ನಿವೇಶನಗಳನ್ನು ಹಂಚಿಕೆ ಮಾಡಲು ಕೊರತೆಯುಂಟಾಗಿರುವ ಪ್ರಮಾಣವನ್ನು ಪರಿಶೀಲಿಸಿ ವಿವರಗಳನ್ನು ಸಲ್ಲಿಸಲು ಮಂಡಳಿಯ ಮುಖ್ಯ ಅಭಿಯಂತರ-1 ರವರ ನೇತೃತ್ವದಲ್ಲಿ ಅಧಿಕಾರಿಗಳ ತಂಡ ರಚಿಸಿ ದಿನಾಂಕ: 21-08-2023 ರಂದು ಅಧಿಕೃತ ಜ್ಞಾಪನ ಹೊರಡಿಸಲಾಗಿದೆ. ಈ ತಂಡದಲ್ಲಿ ಕರ್ನಾಟಕ ದಲಿತ ಉದ್ದಿಮೆದಾರರ ಸಂಘ (ರಿ) ರವರ ಸದಸ್ಯರು ಒಳಗೊಂಡಿರುತ್ತಾರೆ.<br>• ಸದರಿ ಅಧಿಕಾರಿಗಳ ತಂಡವು ಈ ನಿಟ್ಟಿನಲ್ಲಿ ಕೊರತೆ ಉಂಟಾಗಿರುವ ಪ್ರಮಾಣದ ಅಂಕಿ-ಅಂಶಗಳನ್ನು ಅಂತಿಮಗೊಳಿಸುತ್ತಿದ್ದು, ಸದರಿ ವರದಿಯನ್ವಯ ಕೊರತೆ ಉಂಟಾದ ಜಮೀನನ್ನು ಪಕ್ಕದ ಹೊಸ ಕೈಗಾರಿಕಾ ಪ್ರದೇಶಗಳಲ್ಲಿ ಸರಿದೂಗಿಸಲು ಕ್ರಮ ಜರುಗಿಸಲಾಗುತ್ತದೆ. |

**ಸಂಖ್ಯೆ: ಸಿಐ 273 ಐಎಪಿ 2024**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು